**ಅಬ್ರಹಾಮನ ದೇವರೇ ನಿನಗೆ**

ಅಬ್ರಹಾಮನ ದೇವರೇ ನಿನಗೆ ಆರಾಧನೆ
ಇಸಾಕನ ದೇವರೇ ನಿನಗೆ ಆರಾಧನೆ
ಯಾಕೋಬಿನ ದೇವರೇ ನಿನಗೆ -೨ ಆರಾಧನೆ ಆರಾಧನೆ
ತಂದೆ ಮಗನಿಗೆ ಪವಿತ್ರಾತ್ಮನಿಗೆ
ನಾ ಮಾಡುವೆ ಆರಾಧನೆ

ಅರಾಧನೆ ಆರಾಧನೆ

ನಾನು ಸುಖವಾಗಿ ಬಾಳಬೇಕೆಂದು
ನನ್ನನ್ನು ಸೃಷ್ಟಿಮಾಡಿದೆ
ನಾನು ನಿನ್ನ ಸ್ತುತಿಸಬೇಕೆಂದು
ಹೆಸರಿಡಿದು ನೀ ಕರೆದೆ
ಕೃಪಾಪೂರ್ಣನೇ ಓ ಕೃಪಾಪೂರ್ಣನೇ
ಉಸಿರಿರುವ ದಿನವೆಲ್ಲಾ ನಾ ಮಾಡುವೆ ಆರಾಧನೆ

ಹೃದಯದ ತುಂಬಾ ನಿನ್ನ ಜ್ಞಾಪಕ
ಅದನ್ನು ಬಿಟ್ಟರೆ ಬೇರೇನಿಲ್ಲಪ್ಪ
ಲೋಕವೆಲ್ಲಾ ಹುಡುಕಿ ನಾ ಬಂದೆ
ಎಲ್ಲೂ ಸಿಗಲಿಲ್ಲ ನಿನ್ನಂಥಾ ತಂದೆ
ಕರುಣಾಮಯನೇ ಓ ಕರುಣಾಮಯನೇ
ಬದುಕಿರುವ ದಿನವೆಲ್ಲಾ ನೇಯಾ ಮಾಡುವೆ ಆರಾಧನೆ